SRI P.F. RODRIGUES.—The answer is to the second part. It means the houses are in good order. If there are any houses requiring repairs, please bring it to our notice and we will definitely look into them.

Surplus Land in Belgaum District.

(285) SRI P.P. HEGRE (Chikkodi).—Will the Minister for Revenue be pleased to state:

(*a*) the total area of land declared as surplus under the provisions of the Karnataka Land Reforms Act, in Belgaum district (talukwise figures may kindly be provided);

(*b*) the total area of such land distributed among the poor people and the number of such families benefitted;

(*c*) out of those the total area of land distributed among the S.Cs people and the number of such families?

SRI B. BASAVALINGAPPA.—Minister for Revenue.

(*a*) —

		(Extent in acres) up to the end of 31-10-1978
Belgaum	...	189
Hukkeri	...	113
Athani	...	2077
Chikodi	...	291
Gokak	...	414
Bailhongal	...	93
Parasagad	...	956
Ramdurg	...	1683
Khanapur	...	4910
Raibagh	...	991
Total	...	11717

(*b*) —

(i) 5920 acres.

(ii) 919 persons

(c) —

(i) 2547 acres

(ii) 405 persons.

ಶ್ರೀ ಪಿ. ಪಿ. ಹೆಗಡೆ.—ಸ್ವಾಮಿ, ಮಾನ್ಯ ಮಂತ್ರಿಯವರು ನನ್ನ (ಆ) ಮತ್ತು (ಇ) ಪ್ರಶ್ನೆಗಳಿಗೆ ಏನು ಉತ್ತರಗಳನ್ನು ಕೊಟ್ಟಿದ್ದಾರೆ ಅದನ್ನೇ ತಾಲ್ಲೂಕುವಾರು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಹೋಗಲಿ ಈಗಲಾದರೂ ತಾಲ್ಲೂಕುವಾರು ಅಂಕಿಸಂಖ್ಯೆಗಳನ್ನು ಕೊಡುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ (ಆ) ಬಡವರಿಗೆ ಹಂಚಲಾದ ಅಂಥ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು ಹಾಗೂ ಅದರಿಂದ ಪ್ರಯೋಜನ ಪಡೆದ ಅಂಥ ಕುಟುಂಬಗಳೆಷ್ಟು ಎಂದು. ಅದಕ್ಕೆ ನಾನು ಕೊಟ್ಟಿರುವ ಉತ್ತರ ''೫೯೨೦ ಎಕರೆಗಳು'' ಹಾಗೂ ೧೦೯ ಮಂದಿ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಪಿ. ಪಿ. ಹೆಗಡೆ. ಸ್ವಾಮಿ, ಚಿಕ್ಕೋಡಿ ತಾಲ್ಲೂಕಿನಲ್ಲಿ ಎಷ್ಟು ಕುಟುಂಬಗಳು ಈ ಪ್ರಯೋಜನ ಪಡೆದಿವೆ ಎಂಬುದನ್ನು ಕೊಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಅವರು ಆರೀತಿ ಕೇಳಿದ್ದರೆ ಉತ್ತರ ಕೊಡುತ್ತಿದ್ದೆ. ಈಗಲೂ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಪಿ. ಪಿ. ಹೆಗಡೆ.—ಸ್ವಾಮಿ, ಈಗಾಗಲೇ ಸುಮಾರು ಅರ್ಧದಷ್ಟು ಹೆಚ್ಚುವರಿ ಜಮೀನನ್ನು ಹಂಚಲಾಗಿದ್ದು ಇನ್ನೂ ಅರ್ಧದಷ್ಟು ಉಳಿದಿದೆ. ಅದನ್ನು ಹಂಚುವುದಕ್ಕೆ ಯಾವಾಗ ಕ್ರಮ ಕೈಗೊಳ್ಳುತ್ತೀರಿ ? ಅದಕ್ಕೆ ಎಷ್ಟು ದಿವಸ ಬೇಕಾಗುತ್ತದೆ ?

ಶ್ರೀ ಬಿ. ಬಸವಲಿಂಗಪ್ಪ.—ಹಿಂದೆ ಈ ಹೆಚ್ಚುವರಿ ಜಮೀನನ್ನು ಹಂಚುವುದಕ್ಕೆ ಟ್ರಿಬ್ಯುನಲ್‌ಗೆ ಅಧಿಕಾರವನ್ನು ಕೊಟ್ಟಿದ್ದೆವು. ಆದರೆ ಈಗ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಆದಷ್ಟು ಜಾಗ್ರತೆ ಈ ಹೆಚ್ಚುವರಿ ಜಮೀನನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ ಪಿ. ಹೆಗಡೆ.—ಸಾಮಿ, ನನ್ನ (ಆ) ಪ್ರಶ್ನೆಗೆ ತಾವು ಕೊಟ್ಟಿರುವ ಉತ್ತರವನ್ನು ನೋಡಿದರೆ, ಹಂಕ್ಕೇರಿ, ಚಿಕೋಡಿ, ಬೈಲ ಹೊಂಗಲ ತಾಲ್ಲೂಕುಗಳಲ್ಲಿ ಹೆಚ್ಚುವರಿ ಜಮೀನೇ ಇಲ್ಲವೆಂದು ತೋರುತ್ತದೆ. ಸ್ವಾಮಿ, ದೂದುಗಂಗ, ವೇದಗಂಗ ನದಿಗಳು ಹರಿಯುವ ಕೆಲವು ಗ್ರಾಮಗಳಲ್ಲಿ ಈ ಹೆಚ್ಚುವರಿ ಜಮೀನು ಇದೆ. ಆದರೆ, ಆ ಜಮೀನನ್ನೆಲ್ಲಾ ಅಲ್ಲಿರತಕ್ಕ ಆಸ್ತಿವಂತರು ಒಂದು ಸೊಸೈಟಿ ಮಾಡಿಕೊಂಡು ಅದರ ಮೂಲಕ ತಾವೇ ಉಳುವೆ ಮಾಡಿಕೊಂಡು ಬರುತ್ತಿದ್ದಾರೆ, ಅಲ್ಲಿನ ಬಡ ಜನರಿಗೆ ಈ ಜಮೀನು ಸಿಕ್ಕುವಂತಿಲ್ಲ. ಅಲ್ಲದೆ ಸರ್ಕಾರದವರೂ ಕೂಡ ಈ ಹೆಚ್ಚುವರಿ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಂಡಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಹೆಚ್ಚುವರಿ ಜಮೀನನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳುವುದಲ್ಲದೆ, ಇನ್ನೂ ಎಲ್ಲೆಲ್ಲಿ ಸಾಗುವಳಿಗೆ ಬರತಕ್ಕ ಜಮೀನು ಇದೆ ಅದನ್ನೆಲ್ಲಾ ತೆಗೆದುಕೊಂಡು ಜಮೀನಿಲ್ಲದ ಬಡವರಿಗೆ ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ನಾನು ಗಮನದಲ್ಲಿ ಇಟ್ಟುಕೊಳ್ಳುವುದೆ ಅಲ್ಲದೆ. ಭೂಸುಧಾರಣಾ ಕಾನೂನು ಪ್ರಕಾರ ಹೆಚ್ಚುವರಿ ಜಮೀನನ್ನು ಕೊಡದೆ, ಸುಳ್ಳು ಡಿಕ್ಲರೇಷನ್ ಏನಾದರೂ ಕೊಟ್ಟಿದ್ದರೆ ಅದನ್ನು ಪರಿಶೀಲಿಸುತ್ತೇವೆ. ಮಾನ್ಯ ಸದಸ್ಯರೂ ಕೂಡ ಇಂಥ ಪ್ರಕರಣಗಳು ಏನಾದರೂ ಇದ್ದಲ್ಲಿ, ಅದನ್ನು ನಮ್ಮ ಗಮನಕ್ಕೆ ತಂದರೆ ಪುನಃ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

Water Supply Scheme at Vittal Town

312. SRI B. V. KAKKILAYA (Vittal).—Will the Minister for Rural Development and Panchayati Raj be pleased to state.—

(a) when was the Water Supply Scheme to Vittal Town Panchayat sanctioned ;